ದಿ.07.11. 2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ . ಎ.ಎಸ್.ಕೆ ವಕೀಲರಿಂದ.**

1. ನಾನು ಅಂಡಿಮೆಂಟ್ ಪ್ರನೋಟ್ ಗೆ ಸಹಿ ಮಾಡಿರುತ್ತೇನೆ. ಮಂಜಪ್ಪನವರು ಯಶೋಧಮ್ಮನವರಿಗೆ ಅಂಡಿಮೆಂಟ್ ಪ್ರನೋಟ್ ಬರೆದುಕೊಟ್ಟಿರುತ್ತಾರೆ. ಮಂಜಪ್ಪನವರು ಹಣ ಸಂದಾಯವಾದ ರಶೀದಿಯನ್ನು ಬರೆದುಕೊಟ್ಟಿರುತ್ತಾರೆ. ನಾನು ಸಾಕ್ಷಿದಾರನಾಗಿ ಎರಡು ದಾಖಲೆಗಳಿಗೂ ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–01(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಮಂಜಪ್ಪನವರು ನಿಪಿ–01 ಕ್ಕೆ ಸಹಿ ಮಾಡಿರುತ್ತಾರೆ ಮತ್ತು ಹೆಬ್ಬೆಟ್ಟು ಗುರುತನ್ನು ಸಹ ಹಾಕಿರುತ್ತಾರೆ. ಮಂಜಪ್ಪನವರ ಸಹಿಯನ್ನು ಈಗಾಗಲೇ ನಿಪಿ–01(ಎ) ಮತ್ತು (ಬಿ) ಎಂದು ಈಗಾಗಲೇ ಗುರುತಿಸಲಾಗಿದೆ.

2. ಗುರುಮೂರ್ತಿ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿ ಗುರುಮೂರ್ತಿಯವರ ಸಹಿಗಳನ್ನು ನಿಪಿ–01(ಇ) ಮತ್ತು (ಎಫ್) ಎಂದು ಗುರುತಿಸಲಾಯಿತು. ಈ ಪತ್ರವನ್ನು ಆನಂದಕುಮಾರ್ ಎನ್ನುವವರು ನಿಪಿ–01 ಅನ್ನು ಬರೆದಿರುತ್ತಾರೆ. ಸಾಕ್ಷಿ ಆನಂದಕುಮಾರ್ ರವರ ಸಹಿಗಳನ್ನು ನಿಪಿ–01 (ಜಿ) ಮತ್ತು (ಹೆಚ್) ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ